ಅ) ಈ ಎರಡೂ ಯೋಜನೆಗಳು ಇದುವರೆಗೂ ಕಾರ್ಯಗತವಾಗದಿರಲು ಕಾರಣಗಳೇನು;

ಇ) ಹಾಗಿದ್ದಲ್ಲಿ ಅದ್ಯತೆಯ ಮೇಲೆ ಈ ಯೋಜನೆಗಳನ್ನು ಪೂರ್ಣಗೊಳಿಸಿ ಗ್ರಾಮಸ್ಥರ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗುವುದೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಬಂದಿದೆ.

ಆ) ಈ ಎರಡು ಅಭಿವೃದ್ಧಿ ಯೋಜನೆಗಳ ವಿವರವಾದ ಅಂದಾಜುಗಳಿಗೆ ತಾಂತ್ರಿಕ ಮಂಜೂರಾತಿಗಾಗಿ ಕಾದಿದ್ದು, ತಾಂತ್ರಿಕ ಮಂಜೂರಾತಿ ದೊರೆತ ಕೂಡಲೇ ಯೋಜನೆಗಳನ್ನು ಪ್ರಾರಂಭಿಸಲಾಗುವುದು.

ಇ) ಹೌದು.

ಹಾಸನ ಕ್ಷೇತ್ರದ ಮಣಚನ ಹಳ್ಳಿ ಮತ್ತಿತರ ಗ್ರಮಗಳಲ್ಲಿ ಕುಡಿಯುವ ನೀರಿನ ಸರಬರಾಜು.

1459 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹಾಸನ ಕ್ಷೇತ್ರದ
   1. ಮಣಚನಹಳ್ಳಿ
   2. ಎರೆಹಳ್ಳಿ
   3. ಆರೆಗಲ್ಲು ಹೊಸಹಳ್ಳಿ

ಗ್ರಾಮಗಳ ಜನಸಂಖ್ಯೆಯು ಎರಡು ಸಾವಿರಕ್ಕೂ ಮೇಲ್ಪಟ್ಟಿದ್ದು, ಈ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತುಂಬಾ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಹಾಗಿದ್ದಲ್ಲಿ ಈ ಮೂರು ಗ್ರಾಮಗಳನ್ನು ಒಟ್ಟಿಗೆ ಸೇರಿಸಿ ಒಂದು ನೀರು ಸರಬರಾಜು ಯೋಜನೆಯನ್ನು 1991-92ನೇ ಸಾಲಿಗೆ ಮಂಜೂರು ಮಾಡಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುವುದೇ?

ಶ್ರೀ.ಬಿ. ಬಸಮಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

1. ಬಂದಿದೆ.
2. ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಈ ಮೂರು ಗ್ರಾಮಗಳನ್ನು ಒಳಗೊಂಡಂತೆ ಒಂದು ಸಂಯುಕ್ತ ನೀರು ಸರಬರಾಜು ಯೋಜನೆಯ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು.

ಅನೇಕ ಗ್ರಾಮಗಳಿಗೆ ಶವ ಸಂಸ್ಕಾರ ಮಾಡಲು ಸ್ಮಶಾನದ ಕೊರತೆ ಇರುವುದು.

1591 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಚ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದ ಅನೇಕ ಗ್ರಾಮಗಳಲ್ಲಿ ಶವ ಸಂಸ್ಕಾರ ಮಾಡಲು ಸ್ಮಶಾನದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸ್ಮಶಾನಕ್ಕಾಗಿ ಜಾಗವನ್ನು ಕಾಯ್ದಿರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಹೌದು, ರಾಜ್ಯದ ಕೆಲವು ಗ್ರಾಮಗಳಲ್ಲಿ ಶವ ಸಂಸ್ಕಾರ ಮಾಡಲು ಸ್ಮಶಾನಭೂಮಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಜಿಲ್ಲಾಪರಿಷತ್ ಕಾಯ್ದೆ ಕಲಂ 56(8)ರನ್ವಯ ರುದ್ರಭೂಮಿ ಮತ್ತು ಸ್ಮಶಾನಗಳ ನಿರ್ವಹಣೆಯು ಮಂಡಲ ಪಂಚಾಯತಿಗಳ ಪ್ರಕಾರ್ಯಗಳಲ್ಲಿ ಒಂದಾಗಿರುತ್ತದೆ. ಮಂಡಲ ಪಂಚಾಯತಿಯ ಪ್ರಧಾನರುಗಳಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಜಿಲ್ಲಾಪರಿಷತ್ತಿನಿಂದ ಸೂಚನೆಗಳನ್ನು ನೀಡಲಾಗಿದೆ. ಸಾಮಾನ್ಯವಾಗಿ ದಹನ ಕ್ರಿಯೆಗಳನ್ನು ಸರ್ಕಾರಿ ಜಮೀನಾದ ಹಳ್ಳಖಿರಾಬ, ಹುಲ್ಲು ಬನಿಖಿರಾಬು, ಗೋಮಾಳಭೂಮಿ, ನದಿದಂಡೆ. ಕೆರೆದಂಡೆ ಮುಂತಾದೆಡೆಗಳಲ್ಲಿ ನಡೆಸುತ್ತಿರುತ್ತಾರೆ. ಸರ್ಕಾರಿ ಜಮೀನು ಲಭ್ಯವಿರದಿದ್ದಾಗ ಸಾರ್ವಜನಿಕರಿಂದ ಭೂ ಸ್ವಾಧೀನ ಮಾಡಿಕೊಳ್ಳಲು ಭೂ ಸ್ವಾಧೀನ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ತುಮಕೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ.

1594 – ಶ್ರೀ ಆರ್. ನಾರಾಯಣ (ಬೆಳ್ಳಾವಿ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಬಂದಿದೆ.

ಆ) ಅವಶ್ಯಕತೆ ಇದ್ದಲ್ಲೆಲ್ಲ ಅಭಾವ ಪರಿಹಾರ ಕಾಮಗಾರಿ ಅಡಿಯಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನು ತೋಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಧಾರವಾಡ ಜಿಲ್ಲೆಗೆ ಕಳಪೆ ದರ್ಜೆ ಆಹಾರ ಧಾನ್ಯಗಳನ್ನು ವಿತರಿಸುತ್ತಿರುವುದು.

1666 - ಶ್ರೀ ಜಿ.ಎನ್. ಪಾಟೀಲ್ (ರೋಣ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಧಾರವಾಡ ಜಿಲ್ಲೆಗೆ ಕಳಪೆ ದರ್ಜೆ ಆಹಾರ ಧಾನ್ಯಗಳನ್ನು ವಿತರಿಸುತ್ತಿರುವುದು ನಿಜವೇ?

2) ಈ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

1) ಹೌದು (ಕೆಲವು ಸಂದರ್ಭಗಳಲ್ಲಿ)

2) 1990ನೇ ಸಾಲಿನ ಕೆಲವು ತಿಂಗಳಲ್ಲಿ ಅದರಲ್ಲೂ ಆಗಸ್ಟ್ ತಿಂಗಳಿಂದ ಡಿಸೆಂಬರ್-90ರ ತಿಂಗಳಲ್ಲಿ ಕಳಪೆ ದರ್ಜೆಯ ಅಕ್ಕಿ ಭಾರತ ಆಹಾರ ನಿಗಮದಿಂದ ಜಿಲ್ಲೆಯ ಎಲ್ಲಾ ಸಗಟು ಆಹಾರ ನಿಗಮದಿಂದ ಜಿಲ್ಲೆಯ ಎಲ್ಲಾ ಸಗಟು ಮಾರಾಟಗಾರರಿಗೆ, ಭಾರತ ಆಹಾರ ನಿಗಮದಿಂದ ಆಹಾರ ಧಾನ್ಯ ಎತ್ತುವಳಿ ಮಾಡುವುದಕ್ಕಿಂತ ಮುಂಚಿತವಾಗಿ ಪರಿಶೀಲನೆ ಮಾಡಿ ನಂತರ ಒಳ್ಳೆಯ ಗುಣಮಟ್ಟದ ಅಕ್ಕಿಯನ್ನು ಮಾತ್ರ ಎತ್ತುವಳಿ ಮಾಡಲು ಸರಬರಾಜಾದ ಕಳಪೆ ದರ್ಜೆ ಅಕ್ಕಿಯನ್ನು ಬದಲಾಯಿಸಲು ತಿಳಿಸಲಾಗಿದೆ. ಭಾರತ ಆಹಾರ ನಿಗಮಕ್ಕೆ ತಮ್ಮ ಮಳಿಗೆಯಲ್ಲಿ ಉತ್ತಮ ಗುಣಮಟ್ಟದ ಅಕ್ಕಿಯನ್ನು ಬಿಡುಗಡೆ ಮಾಡಲು ತಿಳಿಸಲಾಗಿರುತ್ತದೆ.